Logo | Renukaru | Hanagal Kumar swamigalu | Basavanna

# ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾ (ರಿ.)

# 23ನೇ ಮಹಾ ಅಧಿವೇಶನ

**23, 24 ಮತ್ತು 25 ಡಿಸೆಂಬರ್ 2022**

**ಎಂ.ಬಿ.ಎ. ಕಾಲೇಜು ಮೈದಾನ, ದಾವಣಗೆರೆ**

**ಆತ್ಮೀಯ ಆಮಂತ್ರಣ**

**ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭೆಯ 23ನೇ ಮಹಾ ಅಧಿವೇಶನ ಕಾರ್ಯಾಲಯ**

**ಶ್ರೀಮದ್ ಅಭಿನವ ರೇಣುಕ ಮಂದಿರ, ಪಿ.ಬಿ.ರಸ್ತೆ, ದಾವಣಗೆರೆ–577002**

**94484–66422, 94836–19966**

devaramanishivakumr@gmail.com

**ಆತ್ಮೀಯ ಬಂಧುಗಳೇ,**

1904ರಲ್ಲಿ ಪೂಜ್ಯ ಹಾನಗಲ್ ಕುಮಾರಸ್ವಾಮಿಗಳಿಂದ **ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭೆಯು** ಸ್ಥಾಪಿತವಾಗಿದ್ದು, ಕಳೆದ 118 ವರ್ಷಗಳಿಂದ ವೀರಶೈವ-ಲಿಂಗಾಯತ ಸಂಘಟನೆಯ ಶ್ರೇಯೋಭಿವೃದ್ಧಿಗೆ ಶ್ರಮಿಸುತ್ತಿದೆ. ಮಹಾಸಭೆಗೆ ಒಂದೂವರೆ ಲಕ್ಷಕ್ಕೂ ಹೆಚ್ಚು ಸದಸ್ಯರಿದ್ದಾರೆ. ಬೆಂಗಳೂರಿನಲ್ಲಿ ತನ್ನದೇ ಆದ **ವೀರಶೈವ-ಲಿಂಗಾಯತ ಭವನ** ಹೊಂದಿದ್ದು, ಬೆಳಗಾವಿ, ಧಾರವಾಡ, ವಿಜಯಪುರ, ಹಾವೇರಿ, ಕಲಬುರ್ಗಿ ಮತ್ತು ಶಿವಮೊಗ್ಗ ಜಿಲ್ಲಾ ಘಟಕಗಳು ಭವನಗಳನ್ನು ಹೊಂದಿವೆ. ಇಂದಿನ ದಿನಮಾನಗಳಲ್ಲಿ ಸಮಾಜದ ಸಂಘಟನೆ ಅತ್ಯಂತ ಮಹತ್ವ ಪಡೆದಿದೆ. ಈ ದಿಶೆಯಲ್ಲಿ ವೀರಶೈವ-ಲಿಂಗಾಯತರನ್ನು ಧಾರ್ಮಿಕ, ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಸಂಘಟಿಸುವ ಉದ್ದೇಶದಿಂದ ಈವರೆಗೆ 22 ಮಹಾಅಧಿವೇಶನಗಳು ನಡೆದಿವೆ.

**23ನೇ ಮಹಾಅಧಿವೇಶನವನ್ನು 2022ರ ಡಿಸೆಂಬರ್ 23, 24 ಮತ್ತು 25ರಂದು** ದಾವಣಗೆರೆ ಜಿಲ್ಲೆಯ **ದಾವಣಗೆರೆ ನಗರದಲ್ಲಿ** ಏರ್ಪಡಿಸಲಾಗಿದೆ. ದಾವಣಗೆರೆ ನಗರವು ಬೆಣ್ಣೆ ನಗರಿ ಎಂದೇ ಖ್ಯಾತಿ ಪಡೆದಿದ್ದು, ಶಿಕ್ಷಣ ಮತ್ತು ಕೈಗಾರಿಕಾ ಕ್ಷೇತ್ರಕ್ಕೆ ಅಪಾರವಾದ ಕೊಡುಗೆ ನೀಡುತ್ತಿದ್ದು, ಕರ್ನಾಟಕ ರಾಜ್ಯದ ಹೃದಯ ಭಾಗವೆಂದೆ ಗುರುತಿಸಲ್ಪಟ್ಟಿದೆ. ದಾರ್ಮಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕವಾಗಿ ಹೆಸರು ಪಡೆದಿರುವ ದಾವಣಗೆರೆಯಲ್ಲಿ ಮಹಾಸಭೆಯ 23ನೇ ಮಹಾಅಧಿವೇಶನ ನಡೆಸಲು ಚಿತ್ರದುರ್ಗ, ಬಳ್ಳಾರಿ, ಹಾವೇರಿ ಮತ್ತು ಚಿಕ್ಕಮಗಳೂರು ಜಿಲ್ಲಾ ಘಟಕಗಳ ಸಹಕಾರದೊಂದಿಗೆ ದಾವಣಗೆರೆ ಜಿಲ್ಲಾ ಘಟಕವು ಆತಿಥ್ಯ ವಹಿಸಿಕೊಂಡಿದೆ. ಈ ಮಹಾ ಅಧಿವೇಶನಕ್ಕೆ ನಾಡಿನ ಹಿರಿಯ ಮಠಾಧೀಶರು, ರಾಜಕೀಯ ಮುಖಂಡರು, ಸಮಾಜದ ಗಣ್ಯರು, ಸಾಹಿತಿಗಳು, ಕಲಾವಿದರನ್ನು ಆಹ್ವಾನಿಸಲಗುತ್ತಿದೆ. ಸಹಸ್ರಾರು ಸಂಖ್ಯೆಯಲ್ಲಿ ಶರಣ ಶರಣೆಯರು ಪಾಲ್ಗೊಳ್ಳಲಿದ್ದಾರೆ.

ಮೂರು ದಿನಗಳ ಕಾಲ ನಡೆಯುವ ಈ ಸಮಾವೇಶದಲ್ಲಿ ಉದ್ಘಾಟನೆ, ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಕೈಗಾರಿಕಾ, ಕೃಷಿ, ಯುವ, ಮಹಿಳಾ ಅಧಿವೇಶನಗಳು ಮತ್ತು ಸಮಾರೋಪ ಸಮಾರಂಭ ಮತ್ತು ಸಾಂಸ್ಕೃತಿಕ ಪರಂಪರೆ ಮುಂತಾದ ವಿಷಯಗಳ ಬಗ್ಗೆ ವಿವಿಧ ಗೋಷ್ಠಿಗಳಿರುತ್ತವೆ. ಅಧಿವೇಶನದ ನೆನಪಿಗೆ **ಸ್ಮರಣ ಸಂಚಿಕೆ** ಬಿಡುಗಡೆ ಮಾಡಲಾಗುತ್ತದೆ. ಮಹಾಸಭೆಯ ಇತಿಹಾಸ, ಕಾರ್ಯಚಟುವಟಿಕೆಗಳನ್ನು ಪರಿಚಯಿಸುವ ವಸ್ತುಪ್ರದರ್ಶನವಿರುತ್ತದೆ. ಪುಸ್ತಕ ಪ್ರದರ್ಶನ ಮತ್ತು ಮಾರಾಟಕ್ಕೆ ವ್ಯವಸ್ಥೆ ಹಾಗೇಯೇ ಕೈಗಾರಿಕಾ ಮತ್ತು ವಾಣಿಜ್ಯ ಹಾಗೂ ಕೃಷಿ ಸಂಬಂಧಿತ ಪ್ರದರ್ಶನವಿರುತ್ತದೆ. ವಚನಗಾಯನ, ನೃತ್ಯರೂಪಕ, ನಾಟಕ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳು ಇರುತ್ತವೆ. ಇಂತಹದೊಂದು ಅಭೂತಪೂರ್ವ ಸಮಾವೇಶಕ್ಕೆ ನಾಡಿನ ವೀರಶೈವ-ಲಿಂಗಾಯತ ಬಂಧುಗಳು ಪ್ರತಿನಿಧಿಗಳಾಗಿ ಆಗಮಿಸಬೇಕೆಂದು ಸ್ವಾಗತ ಸಮಿತಿಯು ಆಮಂತ್ರಿಸುತ್ತಿದೆ.

ಈ ಮಹಾ ಅಧಿವೇಶನಕ್ಕೆ ಆಗಮಿಸಲಿರುವ ಮಹಾಸಭೆಯ ಸದಸ್ಯರು, ವಿವಿಧ ಘಟಕಗಳ/ವಿಭಾಗಗಳ ಅಧ್ಯಕ್ಷರು/ಪದಾಧಿಕಾರಿಗಳು/ಸಮಿತಿ ಸದಸ್ಯರುಗಳು, ಸಮಾಜಬಂಧುಗಳು ಕಡ್ಡಾಯವಾಗಿ ನೋಂದಾಯಿಸಿಕೊಳ್ಳಬೇಕಾಗಿರುತ್ತದೆ. ಈ ನೋಂದಣಿಗಾಗಿ **ರೂ. 500/-ಗಳ** ಶುಲ್ಕ ಭರಿಸಬೇಕಾಗುತ್ತದೆ. ಹೀಗೆ ನೋಂದಾಯಿಸಿಕೊಳ್ಳುವ ಸದಸ್ಯರುಗಳಿಗೆ ಮೂರು ದಿನಗಳ ಕಾಲ ವಸತಿ ಮತ್ತು ಊಟದ ವ್ಯವಸ್ಥೆಯನ್ನು ಮಾಡಲಾಗುವುದು. ನೋಂದಣಿ ಮಾಡಿಸಿಕೊಳ್ಳಲು ಎಲ್ಲ ರಾಜ್ಯ/ಜಿಲ್ಲಾ/ತಾಲ್ಲೂಕು ಘಟಕಗಳನ್ನು ಸಂಪರ್ಕಿಸುವುದು ಅಥವಾ ನೇರವಾಗಿ ________________ ಆನ್‌ಲೈನ್ ಮೂಲಕ ದಿನಾಂಕ: 10-12-2022ರೊಳಗೆ ನೋಂದಾಯಿಸಿಕೊಳ್ಳುವುದು.

ಕರಪತ್ರಕ್ಕೆ ಹೊಂದಿಕೊಂಡಂತೆ ನೋಂದಣಿ ಫಾರಂ ಇದೆ. ಇದನ್ನು ಭರ್ತಿ ಮಾಡಿ ನೋಂದಣಿ ಶುಲ್ಕದೊಂದಿಗೆ ಅಲ್ಲಿ ನೀಡಿರುವ ವಿಳಾಸಕ್ಕೆ ಕಳುಹಿಸಿಕೊಡಲು ಕೋರಲಾಗಿದೆ. ಹೆಚ್ಚಿನ ವಿವರಗಳಿಗೆ ಅಧಿವೇಶನದ ಕಾರ್ಯಾಲಯ ಅಥವಾ ಆಯಾ ರಾಜ್ಯ/ಜಿಲ್ಲಾ/ತಾಲ್ಲೂಕು ಘಟಕಗಳ ಅಧ್ಯಕ್ಷರು/ಪ್ರಧಾನ ಕಾರ್ಯದರ್ಶಿಗಳನ್ನು ಸಂಪರ್ಕಿಸಬಹುದಾಗಿದೆ.

**- ಸ್ವಾಗತ ಸಮಿತಿ**
**23ನೇ ಮಹಾ ಅಧಿವೇಶನ, ದಾವಣಗೆರೆ**

# ನೋಂದಣಿ ಫಾರಂ

**ಕ್ರ.ಸಂ :**

ಭಾವಚಿತ್ರ

ಹೆಸರು : ______________________________

ವಿಳಾಸ : ______________________________

______________________________

______________________________

ದೂರವಾಣಿ : ______________________________

ಇ–ಮೇಲ್ : ______________________________

ಲಿಂಗ : ಸ್ತ್ರೀ / ಪುರುಷ

---

**ಪಾವತಿ ವಿಧಾನ :**

ನಗದು: ಸ್ವೀಕರಿಸಿದವರ ಹೆಸರು & ಹುದ್ದೆ : ........................................................................

ಚೆಕ್ ಸಂಖ್ಯೆ: ......................ದಿನಾಂಕ..............., ಬ್ಯಾಂಕ್ ಹೆಸರು ...........................................

ಡಿ.ಡಿ.ಸಂಖ್ಯೆ : ............................ ದಿನಾಂಕ ............................

Phone pe/Google pay/Paytm Transaction ID ......................., ದಿನಾಂಕ: ......................

**<u>NEFT/RTGS/Cheque/D.D :</u>**

**A/c No : 00020030005851**
**A/c Name : AKILA BHARATHA VEERASHAIVA MAHASABHA JILLA GHATAKA**
**Bank Name : IDBI Bank, IFSC : IBKL0069DUB**
**Branch : The Davanagere Urban Co-op Bank Ltd.**

All-in-One QR
DUCB_AKILA BHARATHA VEERASHAIVA

ವಂದನೆಗಳೊಂದಿಗೆ,

**ಪ್ರತಿನಿಧಿ ಸಹಿ**

---

**ಕ್ರ.ಸಂ :**

**ಕಛೇರಿ ಉಪಯೋಗಕ್ಕೆ**

500–00 ರೂ.ಗಳು ನಗದಾಗಿ/ಡಿ.ಡಿ/ಡಿಜಿಟಲ್ ಮೂಲಕ ಸಂದಾಯವಾಗಿರುತ್ತದೆ.

ರಸೀದಿ ನಂ. ....................... ದಿನಾಂಕ: ..............................

**ಸ್ವೀಕರಿಸಿದವರ ಸಹಿ**